ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1687

ಸದಸ್ಯರ ಹೆಸರು : ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ಸಚಿವರು : ಮಾನ್ಯ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸಬೇಕಾದ ದಿನಾಂಕ : 19.03.2021

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ನಂಜನಗೂಡು ರಸಬಾಳೆ ಹಣ್ಣಿನ ತಳಿಯನ್ನು ಜಿಲ್ಲಾ ಮಟ್ಟದ ವಿಶೇಷ ಬೆಳೆ ಎಂದು ಗುರುತಿಸಲಾಗಿದೆಯೇ; ಪ್ರಸ್ತುತ ನಂಜನಗೂಡು ಹಾಗೂ ಯಾವ ಯಾವ ಹಳ್ಳಿಗಳಲ್ಲಿ ಎಷ್ಟು ಎಕರೆಯಲ್ಲಿ, ಎಷ್ಟು ಜನ ರೈತರು ಈ ತಳಿಯನ್ನು ಬೆಳೆಯುತ್ತಿದ್ದಾರೆ; ವಾರ್ಷಿಕ ಉತ್ಪಾದನೆಯ ಪ್ರಮಾಣ ಎಷ್ಟು;	• ನಂಜನಗೂಡು ರಸಬಾಳೆ ಹಣ್ಣಿನ ತಳಿಯನ್ನು ಭೌಗೋಳಿಕ ತಳಿ ಎಂದು ವಿಶೇಷವಾಗಿ ಗುರುತಿಸಲಾಗಿರುತ್ತದೆ. • ಪ್ರಸ್ತುತವಾಗಿ ನಂಜನಗೂಡು ತಾಲ್ಲೂಕಿನಲ್ಲಿ ದೇವರಸನಹಳ್ಳಿ, ಕೂಗಲೂರು, ಮರಳೂರು, ಕೆಂಬಾಲ್ ಗ್ರಾಮಗಳಲ್ಲಿ 12ಎಕರೆ 20 ಗುಂಟೆ ಪ್ರದೇಶದಲ್ಲಿ 14 ರೈತರುಗಳು ಈ ತಳಿಯನ್ನು ಬೆಳೆಯುತ್ತಿದ್ದಾರೆ. • ವಾರ್ಷಿಕ ಉತ್ಪಾದನೆಯ ಪ್ರಮಾಣವು ಅಂದಾಜು 82 ಟನ್ ಆಗಿರುತ್ತದೆ.
ಆ)	ನಂಜನಗೂಡು ರಸಬಾಳೆ ಹಣ್ಣಿನ ತಳಿಯ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳೇನು; ಈ ತಳಿಯ ರಸಬಾಳೆ ಹಣ್ಣನ್ನು ಬೆಳೆಯುವ ರೈತರಿಗೆ ತೋಟಗಾರಿಕೆ ಇಲಾಖೆಯಿಂದ ನೀಡುತ್ತಿರುವ ಸಹಾಯವೇನು; ಹಣ್ಣನ್ನು ಮಾರ್ಕೆಟಿಂಗ್ ಮಾಡಲು ಯಾವ ರೀತಿಯ ವ್ಯವಸ್ಥೆ ಮಾಡಲಾಗಿದೆ? (ವಿವರ ಒದಗಿಸುವುದು)	• ಈ ಹಣ್ಣಿನ ತಳಿಯನ್ನು ಭೌಗೋಳಿಕ ತಳಿ (GI crop) ಎಂದು ಗುರುತಿಸಲಾಗಿದೆ. • ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ (ಸಿ.ಹೆಚ್.ಡಿ) ಕಂದು ನಂಜನಗೂಡು ರಸಬಾಳೆ ಬೇಸಾಯಕ್ಕಾಗಿ ಪ್ರತಿ ಎಕರೆಗೆ ರೂ.40754/- ಸಹಾಯಧನವನ್ನು ನೀಡಿ ಪ್ರೋತ್ಸಾಹಿಸಲಾಗುತ್ತಿದೆ. • ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ನಂಜನಗೂಡು ರಸ ಬಾಳೆಗೆ ಹನಿ ನೀರಾವರಿ ಪದ್ಧತಿ ಅಳವಡಿಸಲು ಶೇಕಡ 90 ರಂತೆ ಎಕರೆಗೆ 28000.00 ಸಹಾಯಧನ ನೀಡಲಾಗುತ್ತಿದೆ. • ಅಂಗಾಂಶ ಕೃಷಿ ನಂಜನಗೂಡು ರಸಬಾಳೆಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗಖಾತ್ರಿ ಯೋಜನೆಯಡಿ ಪ್ರತಿ ಎಕರೆಗೆ ರೂ.

		70000/- ಸಾವಿರಗಳನ್ನು ಸಹಾಯಧನ ನೀಡುವ ಮೂಲಕ ಪ್ರೋತ್ಸಾಹಿಸಲಾಗುತ್ತಿದೆ. **ಮಾರುಕಟ್ಟೆ ವ್ಯವಸ್ಥೆ** • ನಂಜನಗೂಡು ರಸಬಾಳೆಗೆ ಹೆಚ್ಚಿನ ಬೇಡಿಕೆ ಇದ್ದು, ನಂಜನಗೂಡು ತಾಲ್ಲೂಕಿನಲ್ಲಿ ಸ್ಥಳೀಯವಾಗಿ ಹಾಗೂ ಮೈಸೂರು ಜಿಲ್ಲೆಯ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ ಇರುತ್ತದೆ. ಜಿಲ್ಲಾ ಹಾಪ್‌ಕಾಮ್ಸ್ ಮುಖೇನ ಮಾರಾಟ ಮಾಡಲಾಗುತ್ತಿದೆ.

Horti 179 HGM 2021

(ಆರ್.ಶಂಕರ್)
ತೋಟಗಾರಿಕೆ ಮತ್ತು
ರೇಷ್ಮೆ ಸಚಿವರು